F.D.P 1/2012 C.W.3

ದಿನಾಂಕ 02.07.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

-

<u>ಪಾಟೀ ಸವಾಲುಃ ಎದುರುದಾರರ ಪರ ಮಾನ್ಯ ಶ್ರೀ ಬಿ ಎಸ್ ಎನ್ ವಕೀಲರಿಂದಃ</u>

ನಿಸಿ-22 ನಾನು ಅಂಚೆ ಕಚೇರಿಯಿಂದ ಕಳುಹಿಸಿರುತ್ತೇನೆ. ನಿಸಿ-22 ಪಕ್ಷಗಾರರಿಗೆ ತಲುಪಿರುವ ಬಗ್ಗೆ ನನಗೆ ಖುದ್ದು ಮಾಹಿತಿ ಇರುವುದಿಲ್ಲ. ನಿಸಿ-22 ಪಕ್ಷಗಾರರಿಗೆ ತಲುಪಿರುವ ಬಗ್ಗೆ ನಾನು ಯಾವುದೇ ರಶೀದಿಯನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ನಿಸಿ-22 ರಲ್ಲಿ ಸ್ಥಳದ ವಿಳಾಸದ ಬಗ್ಗೆ ಮಾಹಿತಿಯನ್ನು ನೀಡಿ ದಾವೆ ಸ್ಥಳಕ್ಕೆ ಕರೆದುಕೊಂಡು ಹೋಗಲು ತಿಳಿಸಿದೆ ಎಂದು ನಮೂದು ಮಾಡಿದ್ದು, ಅದರ ಅರ್ಥ ದಾವಾ ಆಸ್ತಿಯ ವಿಳಾಸ ನನಗೆ ತಿಳಿಯದೇ ಇದ್ದರೆ ಪಕ್ಷಗಾರರು ನನ್ನನ್ನು ಕರೆದುಕೊಂಡು ಹೋಗಬೇಕು ಎಂದು, ಸಾಕ್ಷಿಯು ಮುಂದುವರಿದು ಪೋನ್ ಮುಖಾಂತರ ವಿಳಾಸ ತಿಳಿಸಿರುತ್ತಾರೆ. ನಾನು ವಿಳಾಸಕ್ಕೆ ಹೋಗಿರುತ್ತೇನೆ ಎಂದು ನುಡಿಯುತ್ತಾರೆ. ನನಗೆ ರಂಗನಾಥ್ ಹಾಗೂ ಇನ್ನೊಬ್ಬರು ಅವರ ಹೆಸರು ನೆನಪಿರುವುದಿಲ್ಲ, ಪೋನ್ ಮಾಡಿ ದಾವಾ ಸ್ಥಳ ತಿಳಿಸಿರುತ್ತಾರೆ. ಸೂಚನಾವಳಿಯಲ್ಲಿ ಪಿಡಿಒರವರನ್ನು ಸ್ಥಳಕ್ಕೆ ಕರೆದುಕೊಂಡು ಹೋಗಬೇಕು ಎಂದು ನಮೂದಾಗಿರುತ್ತದೆ ಎಂದರೆ ಸರಿಯಲ್ಲ. ನನಗೆ ದಾವಾ ಸರ್ವೇ ನಂಬರ್ ಮತ್ತು ಸ್ಥಳವನ್ನು ಮಹಜರಿನಲ್ಲಿ ಸಾಕ್ಷಿದಾರರು ತೋರಿಸಿರುತ್ತಾರೆ. ಸದರಿ ಸ್ಥಳವು ಅರಣ್ಯ ಪ್ರದೇಶದಲ್ಲಿ ಬರುತ್ತದೋ ಅಥವಾ ಮಂಜೂರಾತಿ ಪ್ರದೇಶದಲ್ಲಿ ಬರುತ್ತದೋ ಎಂದು ನನಗೆ ಗೊತ್ತಿರುವುದಿಲ್ಲ. ಮಂಜೂರು ಆಗಿರುವ ಎರಡು ಗುಂಟೆ ಪ್ರದೇಶವನ್ನು ಗುರುತಿಸದೇ ಮನೆಯನ್ನು ಗುರುತಿಸಲು ಆಗುವುದಿಲ್ಲ ಎಂದರೆ ಸರಿ. ಪಿಡಿಒರವರು ಬಂದಿದಲ್ಲಿ ನನಗೆ ಮನೆಯ ಸಂಖ್ಯೆ, ಮನೆಯ ವಿಸ್ತೀರ್ಣ ಹಾಗೂ ಚೆಕ್ಕುಬಂಧಿ ನೀಡುತ್ತಿದ್ದರು ಎಂದರೆ ಸರಿ. ನಾನು ಪಕ್ಷಗಾರರಿಗೆ ಯಾವುದೇ ನೋಟಿಸ್ ನೀಡಿರುವುದಿಲ್ಲ ಆದ ಕಾರಣ ನಾನು ಯಾವುದೇ ಸ್ವೀಕೃತಿಯನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸಾಕ್ಷಿಯು ಸ್ವೀಕೃತಿ ಹಾಜರುಪಡಿಸಿರುವುದಿಲ್ಲ ಎಂದು ನುಡಿಯುತ್ತಾರೆ. ಈ ಹಿಂದೆ ಕಮೀಷನರ್ ವರದಿ ಮಾಡಿದ್ದನ್ನು ಅದನ್ನೇ ಮರು ತಯಾರಿ ಮಾಡಿ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ ಎಂದರೆ ಸ್ಥಳಕ್ಕೆ ಹೋಗಿರುತೇನೆ ಎಂದು ನುಡಿಯುತ್ತಾರೆ. ನಾನು ಸ್ಥಳಕ್ಕೆ ಹೋಗುವಾಗ ಕಂಪ್ಯೂಟರ್, ಲ್ಯಾಪ್ ಟಾಪ್ ತೆಗೆದುಕೊಂಡು ಹೋಗಿರುವುದಿಲ್ಲ. ನಿಸಿ-23 ನಾನು ಮುಂಚಿತವಾಗಿ ಕಚೇರಿಯಲ್ಲಿ ಮಾಡಿಕೂಾಂಡು ಸ್ಥಳಕ್ಕೆ ಹೋಗಿರುತ್ತೇನೆ. ನಿಪಿ-23 ಕ್ಕೆ ನಾನು ಸಹಿ ಮಾಡಿರುವುದಿಲ್ಲ ಎಂದರೆ ಸರಿ. ನಿಸಿ-23 ಕ್ಕೆ ಸಹಿ ಮಾಡಿರುವ ಸಾಕ್ಷಿದಾರರ ಸಹಿಗಳನ್ನು ನನ್ನ ಕಚೇರಿಯ ಕಾರ್ಯ ವ್ಯಾಪ್ತಿಯೊಳಗೆ ಒತ್ತಡ ತಂದು ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ.

ಮುಂದುವರೆದು ಎದುರುದಾರರ 5 ರಿಂದ 9 ರವರು 4 ನೇ ಎದುರುದಾರ ಪಾಟೀ ಸವಾಲನ್ನು ಅಳವಡಿಸಿಕೊಳ್ಳುತ್ತಾರೆ.

<u>ಮರು ವಿಚಾರಣೆಃ ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿಯಾಗಿದೆ ಎಂದು ಒಪ್ಪಿರುತ್ತಾರೆ.

ಸಾಕ್ಷಿ ಸಹಿಃ

ಸಿವಿಲ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಧೀಶರು,
ನ.ರಾ. ಪುರ.